ಸೇವೆ ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ಮತ್ತು ಸದಸ್ಯರಿಗೆ ಅಪ್ಪೊಂದು ಸವಾಧಾನಕರವಾಗಿರಲಿಲ್ಲ. ಅವರು ಅಲ್ಲಿ ಇರುತ್ತಲೇ ಇರಲಿಲ್ಲ. ಜಿಲ್ಲಾ ಮುಖ್ಯ ಕಾರ್ಯದರ್ಶಿಯಾಗಿ ನಾವು ನೇಮಕ ಮಾಡತಕ್ಕಂಥವರು ಅಲ್ಲಿ ಹೊಂದುಕೊಂಡು ಹೋಗಬೇಕು. ಡೆವಲಪ್‌ಮೆಂಟಲ್ ದೃಷ್ಟಿ ಅವರಲ್ಲಿ ಇರಬೇಕು, ಟೆಂಪರ್‌ಮೆಂಟ್ ಸರಿಯಾಗಿ ಇರಬೇಕು. ಅದೆಲ್ಲ ಸರಿಯಾಗಿ ಇರಬೇಕು. ಇದಾದಮೇಲೆ ಶ್ರೀ ಚಂದ್ರಕೀರ್ತಿ ಎಂದು ಹೇಳಿ ಒಬ್ಬರನ್ನು ಕೇಂದ್ರ ಸರ್ಕಾರದಿಂದ ಎರವಲು ಮೇಲೆ ಕಳಿಹಿಸಿ ಕೊಡಬೇಕೆಂದು ಅವರ ಬಗ್ಗೆ ಆರ್ಡರ್ಸ್‌ನ್ನು ಪಾಸ್ ಮಾಡಿದೆವು. ಆದರೆ ಕೇಂದ್ರ ಸರ್ಕಾರದವರು ಅವರನ್ನು ರಿಲೀವ್ ಮಾಡಲಿಲ್ಲ. ಆದ್ದರಿಂದ ಮೂರನೆಯವರನ್ನು ಹಾಕಬೇಕಾದಂಥ ಪರಿಸ್ಥಿತಿ ಬಂದಿತು. ಅವರನ್ನು ಹಾಕಿದ ಮೇಲೆ ಅವರು ಒಂದು ತಿಂಗಳು ರಜದಮೇಲೆ ಹೋದರು. ಆದ್ದರಿಂದ ಜಿಲ್ಲಾ ಪರಿಷತ್ತಿಗೆ ಸ್ವಲ್ಪ ತೊಂದರೆಯಾಗಿದೆ. ಈಗ ಅವರು ಚಾರ್ಜ್ ತೆಗೆದುಕೊಂಡಿದ್ದಾರೆ.

ಶ್ರೀ ಐ.ಬಿ. ಶಂಕರ್.—ಅಲ್ಲಿ ಉಪ ಕಾರ್ಯದರ್ಶಿಯವರ ಹುದ್ದೆ ಖಾಲಿ ಇದೆ. ದಯವಿಟ್ಟು ಕೂಡಲೇ ಅದನ್ನು ಭರ್ತಿ ಮಾಡಿಕೊಡಬೇಕು. ಸರ್ಕಾರ ಒಪ್ಪುವುದಾದರೆ ಎಲ್ಲಾ ಶಾಸಕರು ಕೂಡಿ ಇಂಥ ವ್ಯಕ್ತಿಯನ್ನು ಹಾಕಬೇಕೆಂದು ಬರೆದು ಕೊಡುತ್ತೇವೆ. ಆ ವ್ಯಕ್ತಿಯನ್ನು ಹಾಕಿದರೆ ಉತ್ತಮವಾದ ಕೆಲಸವಾಗುತ್ತದೆಂಬ ನಂಬಿಕೆ ಇರುವುದರಿಂದ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಆಯಿತು, ಪರಿಶೀಲಿಸುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಒಳ್ಳೆಯ ಉಪ ಕಾರ್ಯದರ್ಶಿಯವರನ್ನು ಹಾಕುತ್ತೇನೆ.

ರಾಷ್ಟ್ರಪಟ್ಟದ ನಾಯಕರುಗಳಿಗೆ ಕೊಟ್ಟಿರುವ ಮನೆಗಳ ಬಗ್ಗೆ.

೧೨೧೩. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಮಂತ್ರಿಗಳಿಗೆ ವಾಸಕ್ಕಾಗಿ ನೀಡಿರುವ ಮನೆಗಳ ಸಂಖ್ಯೆ ಎಷ್ಟು?

ಆ) ಮಂತ್ರಿಗಳಲ್ಲದೆ ಬೇರೆಯವರಿಗೆ ಸರ್ಕಾರಿ ಅಧಿಕೃತ ನಿವಾಸಗಳನ್ನು ಕೊಟ್ಟಿರುವುದು ನಿಜವೇ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೧೭

ಆ) ಹೌದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ರಾಜ್ಯದಲ್ಲಿರತಕ್ಕ ಮಂತ್ರಿಗಳ ಸಂಖ್ಯೆ ಎಷ್ಟು? ಈ ಸದನದಲ್ಲಿರತಕ್ಕ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸಂಖ್ಯೆ ಎಷ್ಟು? ಸರ್ಕಾರದ ಮನೆಗಳ ಸಂಖ್ಯೆ ಎಷ್ಟು? ಬೇರೆ ಮನೆಯಲ್ಲಿರತಕ್ಕ ಮಂತ್ರಿಗಳ ಸಂಖ್ಯೆ ಎಷ್ಟು? ಮತ್ತು ಅದಕ್ಕೆ ಬಾಡಿಗೆ ಎಷ್ಟು? ಸರ್ಕಾರಕ್ಕೆ ಬಾಡಿಗೆಯಿಂದ ಬರತಕ್ಕ ವೆಚ್ಚ ಎಷ್ಟು? ದಯವಿಟ್ಟು ಹೆಸರಿನೊಂದಿಗೆ ಎವರ ಹೆಸರಿದರೆ ನನಗೆ ಆನಂದವಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಂತ್ರಿಮಂಡಲದಲ್ಲಿ ಎಷ್ಟು ಮಂದಿ ಸದಸ್ಯರಿದ್ದಾರೆಂದು ಎಲ್ಲರಿಗೂ ಗೊತ್ತಿದೆ, ಅದನ್ನು ಬಿಡಿಸಿ ಹೇಳಬೇಕಾಗಿಲ್ಲ. ಈಗ ರಾಜ್ಯ ಮಂತ್ರಿಗಳಲ್ಲಿ ೯ ಮಂದಿ ಮಂತ್ರಿಗಳಿಗೆ ಸರ್ಕಾರಿ ಆಕಾಮಡೇಷನ್ ಕೊಟ್ಟಿದ್ದೇವೆ. ಮೂರು ಜನ ಮಂತ್ರಿಗಳು ತಮ್ಮ ಸ್ವಂತ ನಿವಾಸದಲ್ಲಿದಾರೆ; ಮುಖ್ಯ ಮಂತ್ರಿಗಳು, ಅರ್ಬನ್ ಡೆವಲಪ್‌ಮೆಂಟ್ ಮಂತ್ರಿಗಳು ಮತ್ತು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು. ಕೆಲವರು ಎಲ್.ಹೆಚ್.ನಲ್ಲಿ ಇದ್ದಾರೆ. ಮತ್ತೆ ಕೆಲವರು ಕುಮಾರ ಕೃಪದಲ್ಲಿದ್ದಾರೆ. ಮಾನ್ಯ ಮಲ್ಲಾರಿಗೌಡರ ಪ್ರಶ್ನೆ ಹೊರಗಿನ ಜನ ಇಲ್ಲಿ ಯಾರಿದ್ದಾರೆಂದು. ಹೊರಗಿನವರಿಗೆ ಕೊಟ್ಟಿರತಕ್ಕದ್ದು, ಕೇವಲ ಹಿಂದಿನ ನಮ್ಮ ರಾಷ್ಟ್ರಪತಿಗಳಾದ ಶ್ರೀ ಸಂಜೀವರೆಡ್ಡಿಯವರಿಗೆ ಒಂದು ಮನೆ ಕೊಟ್ಟಿದ್ದೇವೆ. ಅವರು ಇನ್ನೂ ಇಲ್ಲಿ ನೆಲಸುವುದಕ್ಕೆ ಪ್ರಾರಂಭ ಮಾಡಿಲ್ಲ, ಮುಂದಿನ ತಿಂಗಳು ಬರುತ್ತಾರೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಹಿಂದಿನ ರಾಷ್ಟ್ರಪತಿಗಳಿಗೆ ಮನೆ ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಅವರಿಗೆ ಕೊಡತಕ್ಕ ಮನೆಯ ಬೆಲೆ ಎಷ್ಟು? ಖರ್ಚು ಎಷ್ಟು? ಆ ರೀತಿ ಕೊಡಲಿಕ್ಕೆ ಕಾರಣವೇನು? ಈಗಾಗಲೇ ಸರ್ಕಾರಿ ಸ್ವಾಮ್ಯದಲ್ಲಿರತಕ್ಕ ಮನೆಗಳ ವ್ಯಾಪ್ತಿಯಲ್ಲಿ ಬೇರೆಯವರಿಗೆ ಜಾಗವನ್ನು ಲೀಸ್ ಮೇಲೆ ಕೊಡತಕ್ಕ ಕಾರ್ಯಕ್ರಮವನ್ನು ಕೈಗೊಳ್ಳುತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಬೇರೆಯವರಿಗೆ ಸ್ಥಳವನ್ನು ಲೀಸ್ ಮೇಲೆ ಕೊಡತಕ್ಕದ್ದು ಅಂದರೆ, ಯಾರು ನಿಮ್ಮ ಮನಸ್ಸಿನಲ್ಲಿದ್ದಾರೆ ಅದನ್ನು ಹೇಳಿಬಿಡಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಅದು ಕೊಟ್ಟನಂತರ ಗೊತ್ತಾಗುತ್ತದೆ. ಮೊದಲು ಗೊತ್ತಾಗುವುದಿಲ್ಲ. ಹೊರಗಿನವರು ಹೇಳುತ್ತಾರೆ, ಮಂತ್ರಿಗಳ ಮನೆ ಪಕ್ಕದಲ್ಲಿ ಹತ್ತು ಗುಂಟೆ ಜಾಗವನ್ನು ಸರ್ಕಾರದವರು ಬೇರೆಯವರಿಗೆ ಕೊಡುತ್ತಿದ್ದಾರೆಂದು. ಈ ತರಹದ ಪ್ರಚಾರ ಸರಿಯಲ್ಲ. ಸರ್ಕಾರೀ ಸ್ವಾಮ್ಯದಲ್ಲಿರತಕ್ಕ ಸ್ಥಳವನ್ನು ಲೀಸ್ ಮೇಲೆ ಕೊಡತಕ್ಕದ್ದು ಸರಿಯಲ್ಲ,

ಶ್ರೀ ರಾಮಕೃಷ್ಣ ಹೆ ಡೆ —ಸರ್ಕಾರಕ್ಕೆ ಸೇರಿದಂತಹ ಬಿಲ್ಡಿಂಗ್‌ನಲ್ಲಿ ಮಂತ್ರಿಗಳು ಇರುತ್ತಾರೆ. ಮಾನ್ಯ ನಜೀರ್‌ಸಾಬ್‌ರವರು ಮೊದಲು ಇದ್ದ ಮನೆಯ ಪಕ್ಕದಲ್ಲಿ ಒಂದು ಹೋಟೆಲ್ ಇದೆ. ಆ ಹೋಟೆಲಿನ ಕಾಂಪೌಂಡ್ ಮತ್ತು ಸರ್ಕಾರಿ ಬಂಗಲೆಯ ಕಾಂಪೌಂಡ್ ಮಧ್ಯದಲ್ಲಿ ಸ್ವಲ್ಪ ಜಾಗ ಇತ್ತು. ೫–೬ ಅಡಿ ಅಗಲ ಮತ್ತು ೨೫–೩೦ ಅಡಿ ಉದ್ದ. ಅದನ್ನು ಯಾರೂ ಉಪಯೋಗ ಮಾಡುತ್ತಿರಲಿಲ್ಲ. ಕೊಳೆ, ಕಸ ತುಂಬಿಕೊಂಡು ಅದರ ಉಪಯೋಗವಾಗುತ್ತಿರಲಿಲ್ಲ. ಜನರಿಗೆ ಅದರಿಂದ ತೊಂದರೆಯೇ ಆಗುತ್ತಿತ್ತು, ಈಗ ಅದನ್ನು ಕ್ಲೀನ್ ಮಾಡಿಸಿದ ಮೇಲೆ ಹೋಟೆಲ್‌ನವರು ಸರ್ಕಾರಕ್ಕೆ ಮನವಿ ಮಾಡಿದ್ದು ನಿಜ. ಆ ಜಾಗವನ್ನು ನೀವು ನಮಗೆ ಕೊಡುವುದಾದರೆ, ಮಾರ್ಕೆಟ್ ರೇಟ್ ಏನಿದೆಯೋ ಅದಕ್ಕೆ ಕೊಡಿ, ಅದರಿಂದ ಪಾರ್ಕಿಂಗ್‌ಗೆ ಅವಕಾಶವಾಗುತ್ತದೆ ಎಂದು ಕೇಳಿದ್ದರು. ಅದನ್ನು ಅವರಿಗೆ ಕೊಡುವುದಿಲ್ಲವೆಂದು ಹೇಳಿದ್ದು ನಿಜ. ಅದು ಕ್ಯಾಬಿನೆಟ್ ಮುಂದೆ ಬಂತು. ನಮಗೆ ಸೇರಿದಂತಹ ಕಾಂಪೌಂಡನ್ನು ಒಡೆದು ಆ ಜಾಗವನ್ನು ನಮ್ಮ ಸರ್ಕಾರಿ ಬಂಗಲೆಯ ಜಾಗ ಏನಿತ್ತು, ಅದರ ಜೊತೆಗೆ ಸೇರಿಸಿದ್ದೇವೆ ಆದರೆ ಇವತ್ತಿನವರೆವಿಗೂ ಕೊನೇ ತೀರ್ಮಾನವನ್ನು ಮಾಡಿಲ್ಲ. ನನ್ನ ಅಭಿಪ್ರಾಯ ಏನೆಂದರೆ, ಅವರು ಮಾರ್ಕೆಟ್ ಬೆಲೆ ಕೊಡಲು ಸಿದ್ಧರಿದ್ದಾಗ ಅದನ್ನು ಕೊಡುವುದರಲ್ಲಿ ತಪ್ಪು ಇಲ್ಲ. ಅದರಿಂದ ನಮ್ಮ ಸರ್ಕಾರಿ ಬಂಗಲೆಗೆ ಏನೂ ಅನುಕೂಲ ಇಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾಜಿ ರಾಷ್ಟ್ರಪತಿಯವರಿಗೆ ಕೊಡತಕ್ಕ ಬಂಗಲೆ ಯಾವುದು? ಅದಕ್ಕೆ ಆಗತಕ್ಕ ಖರ್ಚು ಎಷ್ಟು? ಅವರಿಗೆ ಬಂಗಲೆಯನ್ನು ಕೊಡುವುದಕ್ಕೆ ಕಾರಣ ಏನು?

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ಉತ್ತರ ಇಷ್ಟೇ. ಮಾನ್ಯ ಸಂಜೀವರೆಡ್ಡಿಯವರು ಕಳೆದ ೩ ೪ ವರ್ಷಗಳಿಂದಲೂ ಬೇಸಿಗೆ ದಿನಗಳಲ್ಲಿ ಇಲ್ಲಿ ಬಂದು ಕೆಲವು ದಿನ ಇದ್ದು ಹೋಗುತ್ತಿದ್ದರು. ಅವರ ಆರೋಗ್ಯ ಕಳೆದ ೨ ವರ್ಷಗಳಿಂದ ಅಷ್ಟು ಸರಿಯಿಲ್ಲ. ಅನಂತಪುರದಲ್ಲಿ ಆರೋಗ್ಯ ಏನಾದರೂ ಕೆಟ್ಟರೆ ತಕ್ಷಣ ಚಿಕಿತ್ಸೆ ಮಾಡತಕ್ಕ ವ್ಯವಸ್ಥೆ ಅಲ್ಲಿಲ್ಲ. ಅಲ್ಲಿಂದ ಹೈದರಾಬಾದಿಗೆ ಬಹಳ ದೂರವಾಗುತ್ತದೆ. ಆದುದರಿಂದ ಅವರು ತಮ್ಮ ಇಚ್ಛೆ ವ್ಯಕ್ತ ಮಾಡಿದರು. ಏನಾದರೂ ನಮಗೆ ಒಂದು ಚಿಕ್ಕ ಮನೆ ಸಿಕ್ಕಿದರೆ, ಅದನ್ನು ಕೊಡುವುದಾದರೆ ಬಹಳ ಅನುಕೂಲ ಆಗುತ್ತದೆ ಎನ್ನುವ ದೃಷ್ಟಿಯಿಂದ ಹೇಳಿದರು. ಇಷ್ಟರ ಒಳಗಾಗಿ ಏನಾಯಿತೆಂದರೆ ಕೇಂದ್ರ ಸರ್ಕಾರದವರು ತಮ್ಮ ನೀತಿ ಬದಲಾವಣೆ ಮಾಡಿದರು. ಹಿಂದಿನ ರಾಷ್ಟ್ರಪತಿ ಮಾನ್ಯ ಜೈಲ್‌ಸಿಂಗ್‌ರವರಿಗೆ ಕೇಂದ್ರ ಸರ್ಕಾರದವರು ಪ್ರತ್ಯೇಕವಾದ ಮನೆ ಹಾಗೂ ಸೆಕ್ಯೂರಿಟಿ ವ್ಯವಸ್ಥೆ ಪ್ರತಿಯೊಂದು ಅನುಕೂಲವನ್ನು ಕೊಟ್ಟರು. ಮತ್ತು ಇದೇ ಅನುಕೂಲತೆ ಎಲ್ಲಾ ರಾಷ್ಟ್ರಪತಿಗಳಾಗಿದ್ದವರಿಗೆ ಅನ್ವಯವಾಗುತ್ತದೆಂದು ಆರ್ಡರ್ ಹೊರಡಿಸಿದ್ದಾರೆ. ಆದುದರಿಂದ ಈ ಒಂದು ಕೇಂದ್ರ ಸರ್ಕಾರದ ಹೊಸ ನೀತಿಯನ್ನು ಪಾಲಿಸಿ ಅವರಿಗೆ ಈ ವ್ಯವಸ್ಥೆಯನ್ನು ಮಾಡಿಕೊಟ್ಟಿದ್ದೇವೆ.